# ವ್ಯವಸ್ಥೆಯ ಬಗ್ಗೆ ಮಾತನಾಡಿ, ಒಳ್ಳೆಯ ಅಪ್ಪ ಅಮ್ಮನಾಗಿ!



ಮಳೆನೀರು ತುಂಬಿದ ರಸ್ತೆಗಳನ್ನು ತಮ್ಮ ಮನೆಗಳಲ್ಲಿ ನಿಂತು ನೋಡುತ್ತಿರುವ ಬೆಂಗಳೂರಿನ ಬಡಾವಣೆಯೊಂದರ ಮಕ್ಕಳು

**ಸಾರ್ವಜನಿಕ ವ್ಯವಸ್ಥೆಯ ಬಗ್ಗೆ ಕಾಳಜಿ ವಹಿಸುವುದು ಕೂಡ ಮಕ್ಕಳ ಪಾಲನೆ ಪೋಷಣೆಯ ಭಾಗವೇ ಆಗಿದೆ.**

**ಸ್ವಯಂಪ್ರಭಾ**

ಮಕ್ಕಳನ್ನು ಬೈಯುವಾಗ ಅವರನ್ನು ಬೇರೆಯವರಿಗೆ ಹೋಲಿಸಬಾರದು ಎಂಬುದು ಒಂದು ಹಳೆಯ ಕಿವಿಮಾತು. ಇದನ್ನು ಪಾಲಿಸುವುದು ಎಷ್ಟು ಕಷ್ಟ ಎನ್ನುವುದು ಎಲ್ಲ ಪೋಷಕರಿಗೂ ಗೊತ್ತಿರುವಂಥದ್ದೇ. ಹೋಲಿಕೆ ಮಾಡುವುದನ್ನು ಎಷ್ಟೇ ನಿಯಂತ್ರಿಸಿಕೊಂಡರೂ, 'ಶ್ರೀಜಿತ ಅಷ್ಟು ಮಾರ್ಕ್ ತೆಗೆಯುವಾಗ ನಿಂಗೇನು ಕಷ್ಟ...' ಎಂಬ ಮಾತು ಬರುತ್ತದೆ. 'ನೋಡು, ಡಾನ್ಸ್ ಕ್ಲಾಸ್‌ಗೆ ಸುಹಾನಿ ಎಷ್ಟು ಶ್ರದ್ಧೆಯಿಂದ ಹೋಗ್ತಾಳೆ, ನೀನೂ ಹೋಗಬಹುದಲ್ಲ...' ಎಂದು ಹೇಳುವುದೂ ಸಹಜ. ಮಕ್ಕಳಿಗೆ ಪ್ರೇರಣೆ ಸಿಗಲಿ ಎಂದು ಅವರಿಗಿಂತ ಮುಂದಿದ್ದವರನ್ನು ತೋರಿಸಿ, ಪ್ರೋತ್ಸಾಹಿಸುವುದು ತಪ್ಪೇನೂ ಅಲ್ಲ. ಆದರೆ ಹೋಲಿಕೆ ಮಾಡುವುದು ಮತ್ತು ಪ್ರೇರಣೆ ನೀಡುವುದರ ನಡುವೆ ಒಂದು ಸಣ್ಣ ಗೆರೆಯಷ್ಟೇ ಇದೆ. ಒಟ್ಟಿನಲ್ಲಿ ಮಕ್ಕಳ ಮನಸ್ಸು ನೋಯದಿದ್ದರೆ ಆಯಿತು, ಅಥವಾ 'ನಾನು ಯಾವುದಕ್ಕೂ ಲಾಯಕ್ಕಿಲ್ಲ' ಎಂಬ ಕೀಳರಿಮೆಯೊಂದು ಅವರಲ್ಲಿ ಮೂಡದಿದ್ದರೆ ಆಯಿತು.

ಪೋಷಕರು ಮಕ್ಕಳನ್ನು ಹೋಲಿಕೆ ಮಾಡಿದ ಹಾಗೆಯೇ ಮಕ್ಕಳು ಕೂಡ ಪೋಷಕರನ್ನು ಹೋಲಿಕೆ ಮಾಡುವುದುಂಟು. ಅದು ಉದ್ಧಟತನದಂತೆ ಕಂಡೀತು. ಆದರೆ ಪೋಷಕರೇ ಸ್ವಯಂ ವಿಮರ್ಶೆ ಮಾಡಿಕೊಳ್ಳುವ ಸಂದರ್ಭಗಳಲ್ಲಿ ಹೋಲಿಕೆಗಳನ್ನು ಮಾಡಿಕೊಂಡು, ತಿದ್ದಿಕೊಳ್ಳುವುದರಲ್ಲಿ ತಪ್ಪಿಲ್ಲ.

ಮಕ್ಕಳು ಚೆಂದಾಗಿ ಬೆಳೆದು, ಸಾಧಕರಾಗಬೇಕು ಎಂದು ಯಾರಿಗೆ ಕನಸಿಲ್ಲ ಹೇಳಿ. ಆದರೆ ಅದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಿದ್ದೇವೆಯೇ ಎಂದು ಪರಾಮರ್ಶಿಸಿಕೊಳ್ಳುವುದು ಮುಖ್ಯ. ಅವರಿಗೆ ಬೇಕಾದ ಬಟ್ಟೆ ಬರೆ, ತಿಂಡಿ ತಿನಿಸು, ದುಡ್ಡು ಕಾಸುಗಳನ್ನು ಕೂಡಿಟ್ಟವರು, ತಾವು ಒಳ್ಳೆಯ ಸೌಕರ್ಯ ಒದಗಿಸಿದ್ದೇವೆ ಎಂದು ಹೇಳಿಕೊಳ್ಳಬಹುದು. ಆದರೆ ಮಕ್ಕಳು ಓಡಾಡುವ ಸಾರ್ವಜನಿಕ ವ್ಯವಸ್ಥೆಗಳ ಕಡೆಗೆ ನಾವು ದಿವ್ಯ ನಿರ್ಲಕ್ಷ್ಯ ತೋರಿದರೆ, ಅದರಿಂದ ನಮ್ಮದೇ ಮಕ್ಕಳಿಗೆ ತೊಂದರೆಯಾಗುತ್ತದೆ ಎಂದು ಮರೆತುಬಿಡುತ್ತೇವೆ. 'ನಮ್ಮ ಮಕ್ಕಳು ಬೆಚ್ಚಗಿದ್ದಾರೆ, ಅಷ್ಟಿದ್ದರೆ ಸಾಕು' ಎನ್ನುವ ಧೋರಣೆಯಲ್ಲಿ ಪೋಷಕರಿರುತ್ತಾರೆ. ರಸ್ತೆ, ಬಸ್ಸು, ಪೊಲೀಸ್ ವ್ಯವಸ್ಥೆ, ಶಾಲೆಗಳು, ಉದ್ಯಾನಗಳು... ಹೀಗೆ ಸಾರ್ವಜನಿಕ ವ್ಯವಸ್ಥೆಗಳನ್ನೂ ಕೂಡ ನಮ್ಮ ಮಕ್ಕಳು ಬಳಸುತ್ತಾರೆ ಎಂಬ ಯೋಚನೆ ಮಾಡುವುದನ್ನು ಮರೆತುಬಿಟ್ಟಿರುತ್ತಾರೆ. ಕೆಟ್ಟಿರುವ ರಸ್ತೆಗಳು, ಮುಚ್ಚಿಹೋಗಿರುವ ಚರಂಡಿಗಳ ಬಗ್ಗೆ ಧ್ವನಿ ಎತ್ತಿ ಮಾತನಾಡುವುದು ಸಮಯ ವ್ಯರ್ಥ ಎಂದು ಭಾವಿಸಿಕೊಂಡು ತಮ್ಮ ಕೆಲಸಗಳಿಗೆ ಹೋಗಿಬಿಡುತ್ತಾರೆ. ಆದರೆ, ನಮ್ಮ ಮುಂದಿನ ತಲೆಮಾರಿನ ಸುರಕ್ಷತೆಗಾಗಿ ಸಾರ್ವಜನಿಕ ವ್ಯವಸ್ಥೆಯನ್ನು ಭದ್ರವಾಗಿ ಕಾಪಾಡುವುದು ಮುಖ್ಯವಾದುದು.

ಇತ್ತೀಚೆಗೆ ಶ್ರೀಲಂಕಾದಲ್ಲಿ ಆರ್ಥಿಕ ವ್ಯವಸ್ಥೆಯು ಕುಸಿದುಬಿದ್ದಾಗ ಅಲ್ಲಿ ಸೃಷ್ಟಿಯಾದ ಪರಿಸ್ಥಿತಿಗಳು ಗಾಬರಿಗೊಳಿಸುವಂತಿದ್ದವು. ಯುದ್ಧಪೀಡಿತ ಉಕ್ರೇನ್‌ನಲ್ಲಿನ ಪರಿಸ್ಥಿತಿಯು ಅತ್ಯಂತ ಕೆಟ್ಟದಾಗಿದೆ. ಲೆಬನಾನ್‌ನಲ್ಲಿ ಮಕ್ಕಳ ಸ್ಥಿತಿಗತಿಗಳ ಬಗ್ಗೆ ಯುನಿಸೆಫ್ ಮಾಡಿದ ವರದಿಯೊಂದು ಗಮನ ಸೆಳೆಯುವಂತಿದೆ ಮತ್ತು ಎಲ್ಲ ಪೋಷಕರಿಗೂ ಎಚ್ಚರಿಕೆಯ ಮಾತುಗಳನ್ನು ಹೇಳುವಂತಿದೆ. ಆರ್ಥಿಕ ದುಸ್ಥಿತಿಯಿಂದಾಗಿ ಅಲ್ಲಿನ ಪೋಷಕರು ಮಕ್ಕಳಿಗೆ ಯಾವುದೇ ಸೌಕರ್ಯಗಳನ್ನು ಒದಗಿಸಲು ಏದುಸಿರುಪಡುತ್ತಿದ್ದಾರೆ. ತಂದೆ ತಾಯಿಯ ಮೇಲೆ ನಂಬಿಕೆಯನ್ನು ಕಳೆದುಕೊಂಡಿರುವ ಮಕ್ಕಳು, ಸ್ವತಃ ದುಡಿಮೆಗೆ ಹೊರಟಿದ್ದಾರೆ. ಕೆಲವು ಮಕ್ಕಳು ತಾವೇ ದುಡಿದು ಪೋಷಕರನ್ನು ಸಾಕುತ್ತಿದ್ದಾರೆ. ಮಕ್ಕಳ ಕಣ್ಣುಗಳಲ್ಲಿ ಸಾಧನೆಯ ಛಲವಾಗಲೀ, ಸುಂದರ ಬದುಕಿನ ಕನಸಾಗಲೀ ಉಳಿದಿಲ್ಲ. ಅವರ ಬಳಿಯಿರುವ ದೊಡ್ಡ ಕನಸೆಂದರೆ, ಯಾವುದಾದರೂ ಬೇರೆ ದೇಶಕ್ಕೆ ವಲಸೆ ಹೋಗುವುದು. ಹಸಿವಿನ ಮುಂದೆ ಸಂಬಂಧಗಳ ಹಂಗು ಎಷ್ಟು ದಿನ ಉಳಿದೀತು?

ವ್ಯವಸ್ಥೆ ಕುಸಿದು ಬಿದ್ದ ಊರಿನಲ್ಲಿ ಮಕ್ಕಳಿಗೆ ಆಟವಾಡುವುದಕ್ಕೆ ನೆರೆಹೊರೆಯೂ ಇರುವುದಿಲ್ಲ. ಸಮುದಾಯಗಳ ಧ್ರುವೀಕರಣದಿಂದಾಗಿ ಪರಸ್ಪರರ ಮೇಲೆ ಅಪನಂಬಿಕೆ ಬೆಳೆದು ಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸಲು ಪೋಷಕರು ಭಯಪಡುತ್ತಿದ್ದಾರೆ. ಅದರಲ್ಲಿಯೂ ಹುಡುಗಿಯರು ಮನೆಯೊಳಗೆ ಬಂಧಿಯಾಗುವುದು ಅನಿವಾರ್ಯವಾಗಿದೆ. 'ಸಾಕಷ್ಟು ಆಹಾರವಿಲ್ಲದೆ, ಉತ್ತಮ ಆರೋಗ್ಯ ವ್ಯವಸ್ಥೆಯಿಲ್ಲದೆ ಮಕ್ಕಳು ಬೆಳೆಯುತ್ತಿದ್ದಾರೆ. ಕುಟುಂಬಕ್ಕಾಗಿ ಮಕ್ಕಳೇ ಹೊರ ಹೋಗಿ ಸಿಕ್ಕ ಕೆಲಸವನ್ನು ಮಾಡಬೇಕಾಗಿದೆ' ಎಂದು ಲೆಬನಾನ್‌ನಲ್ಲಿ ಯುನಿಸೆಫ್ ಪ್ರತಿನಿಧಿಯಾಗಿರುವ ಎಡೋವರ್ಡ್ ಬೀಡರ್ ಹೇಳಿದ್ದಾರೆ.

ಸಾರ್ವಜನಿಕ ವ್ಯವಸ್ಥೆಯ ಕಡೆಗೆ ನಾಗರಿಕರು ತೋರುವ ದಿವ್ಯ ನಿರ್ಲಕ್ಷ್ಯದಿಂದಾಗಿ ಮಕ್ಕಳು ಏನೆಲ್ಲ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂಬುದಕ್ಕೆ ನಾವೇನೂ ಹೊರದೇಶಗಳನ್ನು ನೋಡಬೇಕಾಗಿಲ್ಲ. ಗದಗದಲ್ಲಿ ಸುರಿದ ಮಳೆಗೆ ನೆಂದುಹೋದ ಪುಸ್ತಕಗಳ ಹಾಳೆಗಳನ್ನು ಒಣಗಿಸುತ್ತ ಅಳುತ್ತಿರುವ ಬಾಲಕಿ ಸುರಯ್ಯಾ, ಬೆಂಗಳೂರಿನಲ್ಲಿ ಶಾಲೆಗೆ ಹೋಗಲು ಹೆದರಿ ಮುದುರಿ ಕುಳಿತ ಮಕ್ಕಳು, ವಿವಿಧ ಕಾರಣಗಳಿಗೆ ಕರ್ಫ್ಯೂ ಹೇರಿಸಿಕೊಂಡು ನಲುಗುವ ಊರುಗಳಲ್ಲಿ ಶಾಲೆಗೆ ಹೋಗುವ ಆಸೆಕಂಗಳಲ್ಲಿ ಕುಳಿತ ಮಕ್ಕಳನ್ನು ನೆನಪಿಸಿಕೊಂಡರೆ, ಪೋಷಕರಾದ ದೊಡ್ಡವರು ಸಾರ್ವಜನಿಕ ವ್ಯವಸ್ಥೆಯ ಒಳಿತಿಗಾಗಿ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ ಎಂದು ಅನಿಸುವುದಿಲ್ಲವೇ? ಹಾಗೆ ಅನಿಸದೇ ಇದ್ದರೆ, ನೀವು ನಿಮ್ಮದೇ ಮಕ್ಕಳಿಗೆ ಒಳ್ಳೆ 'ಅಪ್ಪ' ಅಥವಾ 'ಅಮ್ಮ' ಅಲ್ಲವೆಂದೇ ಹೇಳಬೇಕಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in